ಶ್ರೀ ಬಿ. ಸುಬ್ಬಯ್ಯ ಶೆಟ್ಟಿ—ನಾನು ಈಗಾಗಲೇ ಹೇಳಿದ ಹಾಗೆ. ಆಸ್ತಿಪಾಸ್ತಿ ಏನಿತ್ತು ಆದು ಕಾನೂನಿನ ರೀತ್ಯಾ ಟೆನೆಂಟ್ಸ್‌ಗೆ ಹೋದಾಗ, ಕಾನೂನು ರೀತ್ಯಾ ಎಷ್ಟು ಕೊಡಲಿಕ್ಕೆ ಅವಕಾಶವಿದೆಯೋ ಅಷ್ಟು ಕೊಡಲಾಗುತ್ತಿದೆ. ಅದಕ್ಕಿಂತಾ ಜಾಸ್ತಿ ಕೊಡುವಂಥ ಶಕ್ತಿ ಗಣಪತಿಗೆ ಕೊಟ ಹಾಗೆ ಇಲ್ಲ. ಗಣಪತಿ ಊರಿನವರಿಗೆ ಜಾಸ್ತಿ ಶಕ್ತಿ ಕೊಟ್ಟು ಆ ದೇವಸ್ಥಾನವನ್ನು ನಡೆಸುವ ಹಾಗೆ ಮಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ದೇವಸ್ಥಾನಗಳಿಗ ಸಂಬಂಧಪಟ್ಟ ಜಮೀನುಗಳನ್ನು ಸರ್ಕಾರ ಭೂಸುಧಾರಣಾ ಕಾನೂನಿನನ್ವಯ ತೆಗೆದುಕೊಂಡುಬಿಟ್ಟಿದೆ. ಇವತ್ತು ದೇವಸ್ಥಾನಗಳ ಜೀರ್ಣೋದ್ಧಾರದ ಬಗ್ಗೆ ಸರ್ಕಾರದ ನೀತಿ ಏನು ? ಇವತ್ತು ದೇವಸ್ಥಾನಗಳು ಜೀರ್ಣವಾಗಿ ಬಿಟ್ಟಿವೆ. ಅವು ಉಳಿಯಬೇಕಾದರೆ ಜೀರ್ಣೋದ್ಧಾರದ ಕೆಲಸವನ್ನು ಸರ್ಕಾರ ವಹಿಸಿಕೊಳುತ ದೆಯೇ ? ದೇವಸ್ಥಾನಗಳಲ್ಲಿ ಅರ್ಚಕರು ಏನಿದ್ದಾರೆ ಅವರು ಒಂದು ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ ಅವರು ತಮ್ಮ ಶಕ್ತಿಯ ಅಂತರದಲ್ಲಿ ಸಮಾಜಕೂ ಸೇವೆ ಸಲ್ಲಿಸುತ್ತಿದ್ದಾರೆ. ನಮಗೂ ನಿಮಗೂ ಅರ್ಚಕರ ಕೆಲಸದಲ್ಲಿ ನಂಬಿಕೆ ಇಲ್ಲದೇ ಇರಬಹುದು. ಸರ್ವೆ ಸಾಮಾನ್ಯ ಜನ ಅರ್ಚಕರಲ್ಲಿ ಗೌರವ ಇಟ್ಟು ಕೊಂಡಿರುವವರು ಇದ್ದಾರೆ. ಅರ್ಚಕರು ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂದು ನನ್ನ ಒಂದು ನಂಬಿಕೆ. ಅಂಥವರ ಬಗೆ ಸರ್ಕಾರದ ನೀತಿ ಏನು ? ಮಾನ್ಯ ಸದಸ್ಯರಾದ ತಮ್ಮಯ್ಯನವರು ಹೇಳಿದ ಹಾಗೆ ಜಮೀನೂ ಹೋಯಿತು, ದೇವಸ್ಥಾನಕ್ಕೆ ಉತ್ಪತ್ತಿಯೂ ಹೋಯಿತು. ಹಾಗಿದ್ದಮೇಲೆ ದೇವಸ್ಥಾನಗಳು ಉಳಿಯುವುದು ಹೇಗೆ. ಜನಗಳಿಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಸುಲಭವಾಗಿ ಮಂತ್ರಿಗಳು ಉತ್ತರ ಕೊಟ್ಟರು. ಜನಗಳಿಗೆ ಒಳ್ಳೆಯ ಬುದ್ಧಿ ಬರಲಿಲ್ಲ ಎಂದರೆ ದೇವಸ್ಥಾನ, ಅರ್ಚಕರು ಉಳಿಯುವುದು ಹೇಗೆ ? ಈ ಎರಡೂ ವಿಚಾರಗಳ ಬಗ್ಗೆ ಈಗ ಆಗದೇಹೋದರೆ ನಂತರ ಸ್ವಲ್ಪ ಯೋಚನೆಮಾಡಿ ಮಾಡಲಿ. ಇನ್ನೊಂದು ವಿಚಾರ ಏನೆಂದರೆ, ನಮ್ಮ ದೇಶದ ಸಂಸ್ಕೃತಿ ಉಳಿಯಬೇಕು. ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ ದೇವಸ್ಥಾನಗಳು. ಈ ದೇವಸ್ಥಾನಗಳು ಉಳಿಯಬೇಕು. ತಮಿಳುನಾಡು ಸರ್ಕಾರ ದೇವಸ್ಥಾನಗಳ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳನ ಕೈಗೊಂಡು ಲಕ್ಷಗಟ್ಟಿಲೆ ರೂಪಾಯಿಗಳನ್ನು ಖರ್ಚುಮಾಡಿ, ದೇವಸಾ ನಗಳನ್ನು ಉಳಿಸಿಕೊಳ್ಳಬೇಕು, ಕಲೆಗಳನ್ನು ಉಳಿಸಿಕೊಳ್ಳಬೇಕು, ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ ಅಂಥಾ ಒಂದು ಕಾರ್ಯಕ್ರಮವನ್ನು ಮಾಡುತ್ತೀರಾ ? ನಮ್ಮ ರಾಜ್ಯದಲ್ಲಿ ದೇವಸ್ಥಾನಗಳು ಮತ್ತು ಅರ್ಚಕರು ಉಳಿಯುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ—ಮಾನ್ಯ ಸದಸ್ಯರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಸರ್ಕಾರ ದೇವಸ್ಥಾನಗಳ ಜಮೀನನ್ನು ತೆಗೆದುಕೊಂಡಿಲ್ಲ. ದೇವಸ್ಥಾನಗಳ ಜಮೀನನ್ನು ಸರ್ಕಾರದವರು ಟೆನೆಂಟ್ಸ್‌ಗೆ ಕೊಟ್ಟಿದ್ದಾರೆ. ಈ ಬಗ್ಗೆ ನಾವು ಈ ಸದನದಲ್ಲಿ ಕಾನೂನನ್ನು ಮಾಡಿದ್ದೇವೆ. ಅದರ ಪ್ರಕಾರ ಜಮೀನನ್ನು ಕೊಟ್ಟಿದ್ದೇವೆ. ದೇವಸ್ಥಾನಗಳ ಜೀರ್ಣೋದ್ಧಾರದ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಯನ್ನು ಕೇಳಿದ್ದಾರೆ. ಇದರ ಬಗ್ಗೆ ಅವರು ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಓದಿಸಿಕೊಡುತ್ತೇನೆ.

Borewells in Periyapatna Taluk

552. SRI K. S. KALAMARIGOWDA (Periyapatna).—Will the Minister for Rural Development and Panchayati Raj be pleased to state.—

(a) the number of Borewells in Priyapatna taluk;

(b) out of them, the number of borewells which are functioning and not functioning properly ;

(c) the number of villages in which there are no Bore well facilities;

(d) the action taken by the Government in this behalf ?

SRI K. PRABHAKAR (Minister for Rural Development and Panchayati Raj).—

(a) 304

(b).—

(1)	Total number of Borewells dug	...	304
(2)	Number of successful Borewells	...	275
(3)	Number of Borewells fixed with hand pumps	..	272
(4)	*Out of the Borewells fixed with hand pumps* :—		
	( ) Number of Borewells which are functioning properly.	...	245
	(2) Number of Borewells which are not functioning properly	...	27

(c) 45.

(d) Out of 45 villages, one Borewell will be dug at Ayarabedu village under minimum needs programme. Steps will be taken to dig borewells after conducting a survey in the remaining 44 villages, if they fulfil the conditions laid down in Minimum needs programme in due course.

ಶ್ರೀ ಕೆ. ಎಸ್. ಕಾಳಮರಿಗೌಡ,—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ೨೭೫ ಬೋರ್‌ವೆಲ್‌ಗಳು ಚೆನ್ನಾಗಿವೆ ಎಂದು ಹೇಳಿದ್ದೀರಿ. ನಾನು ಹಿಂದೆ ಇದೇ ಪ್ರಶ್ನೆಯನ್ನು ಕೇಳಿದಾಗ, ಎಲ್ಲಾ ಬೋರ್‌ವೆಲ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿವೆಂದು ಉತ್ತರ ಕೊಟ್ಟಿದ್ದೀರಿ. ಆದರೆ ನಮ್ಮ ತಾಲ್ಲೂಕಿನಲ್ಲಿ ಇದರ ಬಗ್ಗೆ ನಾವು ನೋಡಿದಾಗ ಸುಮಾರು ೨೦-೩೦ ಮಾತ್ರ ಸರಿಯಾಗಿ ಕೆಲಸ ಮಾಡುತ್ತಿದ್ದು ಬಾಕಿ ಬೋರ್‌ವೆಲ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ತಾವು ೨೭೫ ಬೋರ್‌ವೆಲ್‌ಗಳು ಸರಿಯಾಗಿ ಕೆಲಸ ಮಾಡುತ್ತಿವೆಯೆಂದು ನಮಗೆ ತಪ್ಪು ವರದಿಯನ್ನು ಕೊಡುತ್ತಿದ್ದೀರಿ. ಈ ಅವ್ಯವಸ್ಥೆಯನ್ನು ಯಾವಾಗ ಸರಿ ಮಾಡಂತ್ತೀರಿ ?

† ಶ್ರೀ ಕೆ. ಪ್ರಭಾಕರ್.—ಇವುಗಳನ್ನು ಸರಿ ಮಾಡುವಂಥ ವ್ಯವಸ್ಥೆಯನ್ನು ಬೇಗ ಮಾಡುತ್ತೇವೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಕಳೆದ ಮೂರು ತಿಂಗಳಿಂದ ಇದನ್ನು ನಾನು ಹೇಳುತ್ತಿದ್ದೇನೆ, ಆದರೂ ಕೂಡ ಯಾವ ಸರಿಯಾದ ವ್ಯವಸ್ಥೆಯನ್ನೂ ಕೂಡ ಸರ್ಕಾರದವರು ಮಾಡಿಲ್ಲ. ಮತ್ತೆ ಈ ರಿಪೇರಿ ಮಾಡುವಂಥ ಕೆಲಸವನ್ನು ಪಿ. ಎಚ್. ಇ. ಇಲಾಖೆಗೆ ಸೇರಿಸಿದ್ದೀರೋ ಅಥವಾ ಬೇರೆ ಇಲಾಖೆಗೆ ಸೇರಿಸಿದ್ದೀರೋ, ಇದಕ್ಕೋಸ್ಕರ ಒಂದು ಸ್ಕ್ವಾಡ್ ಮಾಡಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು, ಇದರ ಜವಾಬ್ದಾರಿಯನ್ನು ಯಾರಿಗೆ ವಹಿಸಿದ್ದೀರಿ ?

ಶ್ರೀ ಕೆ ಪ್ರಭಾಕರ್.—ಬಾವಿಗಳನ್ನು ತೆಗೆಯುವಾಗ, ಕೆಲವು ಕೆಟ್ಟುಹೋಗುತ್ತವೆ. ತಗೆದಂಥ ಬಾವಿಗಳು ಕೆಟ್ಟುಹೋದರೆ, ಅವುಗಳನ್ನು ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಒಂದು ಕಡೆಯಿಂದ ನಾವು ಈ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುತ್ತಾ ಹೋದರೆ, ಇನ್ನೊಂದು ಕಡೆಯಿಂದ ಅವು ಕೆಟ್ಟು ಹೋಗುವಂಥ ಸನ್ನಿವೇಶವೂ ಇರುತ್ತದೆ. ಇದಕ್ಕೆ ನಾವು ಟೈಂ ಬೌಂಡ್ ಕ್ರಮತೆಗೆದು ಕೊಳ್ಳದೇ ಹೋದರೆ ಈ ಸಂಖ್ಯೆ ಪ್ರತಿವರ್ಷವೂ ವ್ಯತ್ಯಾಸದಿಂದ ಕೂಡಿರುತ್ತದೆ. ಬೋರ್‌ವೆಲ್ ಆಪರೇಷನ್‌ನಲ್ಲಿ ಇದು ಇನ್‌ಹೆರೆಂಟ್ ಆಗಿದೆ. ಇಲ್ಲಿ ಸತ್ಯಾಂಶ ಏನು ಎಂದರೆ, ಕೆಲಸ ಮಾಡುತ್ತಿರುವ ಬೋರ್‌ವೆಲ್‌ಗಳ ಸಂಖ್ಯೆ ಕಡಿಮೆ ಇದೆ ಎಂದು ಮಾನ್ಯಸದಸ್ಯರು ಹೇಳುತ್ತಿದ್ದಾರೆ, ಇದನ್ನು ನಾವು ಪೂರ್ತಿಯಾಗಿ ಪರಿಶೀಲನೆ ಮಾಡಿ ಬೇಗ ಇವುಗಳನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಎರಡನೆಯದು, ಇದರ ಜವಾಬ್ದಾರಿ ಯಾರು ಹೊತ್ತಿದ್ದಾರೆ ಎಂದು ಕೇಳಿದ್ದಾರೆ. ಮಾನ್ಯ ಸದಸ್ಯರು ಇವುಗಳ ಪರಿಸ್ಥಿತಿಯನ್ನು ತಿಳಿದುಕೊಂಡಿರುವುದಕ್ಕೆ ನಾನು ಸಂತೋಷ ಪಡುತ್ತೇನೆ. ನಾವು ರಿಪೇರಿ ಮಾಡುವುದರ ಬಗ್ಗೆ ಒಂದು ಸೆಲ್‌ನ್ನು ಏರ್ಪಾಡು ಮಾಡಿದ್ದೇವೆ. ಆಯಾ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಅವರು ಇದರ ಜವಾಬ್ದಾರಿಯನ್ನು ಪಿ. ಎಚ್. ಇ. ಇಲಾಖೆಯವರಿಗೆ ವಹಿಸುತ್ತಾರೆ. ಅವರು ನೇರವಾಗಿ ಒಬ್ಬ

ಆಸಿಸ್ಟೆಂಟ್‌ನ್ನು ಡಿ. ಸಿ. ಯವರಿಗೆ ಕೊಡುತ್ತಾರೆ. ಜಿಲ್ಲಾಧಿಕಾರಿಗಳು ಬಿ. ಡಿ. ಒ. ಗಳ ಮುಖಾಂತರ ಈ ಆಸಿಸ್ಟೆಂಟ್ ಆವರಿಂದ ರಿಪೇರಿ ಕೆಲಸ ಮಾಡಿಸುತ್ತಾರೆ. ಇದರಲ್ಲಿ ಹೆಚ್ಚಿನ ಕಾಂಪ್ಲಿಕೇಟೆಡ್ ವರ್ಕ್ಸ್ ಬಂದರೆ, ಇಲಾಖೆಯವರೇ ಬಂದು ಇದನ್ನು ಸರಿ ಮಾಡುತ್ತಾರೆ, ಇನ್ನು ಮುಂದೆ ಇಂಥ ದುರವಸ್ಥೆ ಇರುವುದಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಕೆ. ಎಸ್. ಕಾಳಮುರಿಗೌಡ.—ಕಳೆದ ಸಾರಿ ನಾನು ಇದೇ ಪ್ರಶ್ನೆಯನ್ನು ಕೇಳಿದಾಗ ತಾವು ಇದಕ್ಕೆ ಉತ್ತರ ಕೊಟ್ಟ ಮೇಲೂ ಇದು ಜಾಸ್ತಿಯಾಗಿದೆ. ತಾವು ಇಲಾಖೆಯವರಿಗೆ ತಿಳಿಸಿದರೆ, ಅವರು ಒಂದೋ ಎರಡನ್ನು ರಿಪೇರಿ ಮಾಡುತ್ತಾರೆ ನಂತರ ಹೊರಟು ಹೋಗುತ್ತಾರೆ. ಇದಕ್ಕೆ ತಾವು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುವಂತ ಅವಸ್ಯಕತೆ ಇರುವುದಿಲ್ಲ. ಕೇವಲ ೫೦-೧೦೦ ರೂಪಾಯಿಗಳನ್ನು ಖರ್ಚು ಮಾಡಿದರೆ ಇವು ಸರಿಯಾಗಿ ಕೆಲಸ ಮಾಡುವಂತೆ ಆಗುತ್ತದೆ. ಇದನ್ನು ಪೂರ್ತಿಯಾಗಿ ಇಲಾಖೆಯವರಿಗೆ ಪಹಿಸಿ, ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳುವುದನ್ನು ನಾನ್ನು ಕೂಲಂಕುಷವಾಗಿ ಪರಿಶೀಲನ್ನೆ ಮಾಡಿ ಇವುಗಳನ್ನು ಬೇಗ ರಿಪೇರಿ ಮಾಡುವುದರ ಜೊತೆಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಇದನ್ನು ತಿಳಿಸಿ ಸರಿಯಾದ ವ್ಯವಸ್ಥೆ ಮಾಡಿ ಕೊಡುತ್ತೇವೆ.

Amount Granted by Sports Council

595. SRI P. RAMADEV (Malleswaram)—Will the Minister of State for Information and Youth Services be pleased to state :—

(a) the amount of grant given to the Karnataka State Sports Council since the last three years upto date (Details may be furnished) ;

(b) the names of persons (Associations and individuals) and the quantum of money given to each of them ;

(c) the criteria prescribed for giving the grant ;

(d) the annual expenditure to be incurred for all the remaining items except grant ?

SRI K. H. SRINIVASA (Minister of State for Information and Youth Services).—

(a) Details are furnished in the statement placed on the Table of the House.

(b) The details of grant-in-aid given to the associations and individuals are given in the statement-'A' placed on the Table of the House. * *

(c) Grant-in-aid has been given in accordance with the rules.

(d) Annual estimated expenditure of Sports Council Rs. 8,57,000 :

Detailed information is given in the Statement-'B' placed on the Table of the House. * *

---

* * Copies placed in the Karnataka Legislature libarary *vide* No. 27.